**ಆಗಸ್ಟ್ 10, 2006**

**ನೈಸರ್ಗಿಕ ವಿಕೋಪಕ್ಕೊಳಪಟ್ಟ ಪ್ರದೇಶಗಳಲ್ಲಿ ವ್ಯವಹಾರದ ಮುಂದುವರಿಕೆ ಖಚಿತಪಡಿಸಿಕೊಳ್ಳಲು ಬ್ಯಾಂಕುಗಳು ತೆಗೆದುಕೊಳ್ಳುವ ಕ್ರಮಗಳು :**

ನೈಸರ್ಗಿಕ ವಿಕೋಪಕ್ಕೊಳಪಟ್ಟ ಪ್ರದೇಶಗಳಲ್ಲಿ ಎಲ್ಲಾ ಬ್ಯಾಂಕಿಂಗ್ ಸೇವೆಗಳನ್ನು ಶೀಘ್ರವಾಗಿ ಪ್ರತಿಷ್ಠಾಪಿಸಲು ಅನುವಾಗುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲಾ ಅನುಸೂಚಿತ ಬ್ಯಾಂಕುಗಳಿಗೆ ಸೂಚನೆಗಳನ್ನು ನೀಡಿದೆ. ನೈಸರ್ಗಿಕ ವಿಕೋಪಕ್ಕೆ ಒಳಗಾದ ಗ್ರಾಹಕರಿಗೆ ಬ್ಯಾಂಕ್ ಖಾತೆಯ ಮರು ಸಂಪರ್ಕ ಕಲ್ಪಿಸಲು ಮತ್ತು ಹೊಸ ಖಾತೆಯನ್ನು ತೆರೆಯಲು ಅನುವು ಮಾಡಿಕೊಡುವುದೂ ಸಹ ಈ ಆದೇಶದ ಒಂದು ಭಾಗವಾಗಿದೆ. ವಿಶೇಷವಾಗಿ ಸರ್ಕಾರ ಮತ್ತು ಇತರೆ ಏಜೆನ್ಸಿಗಳು ನೀಡುವ ಪರಿಹಾರಗಳನ್ನು ಪಡೆಯಲು ಇದು ಅನುವಾಗುತ್ತದೆ. ಚೆಕ್ ತೀರುವೆ ಸೇವೆ ಮತ್ತು ನಗದಿನ ಸರಬರಾಜು ಮುಂತಾದ ಸೇವೆಗಳ ಮುಂದುವರಿಕೆಗೆ ಬ್ಯಾಂಕುಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಹ ಈ ಮಾರ್ಗದರ್ಶನಗಳು ಒಳಗೊಂಡಿವೆ.

ನೈಸರ್ಗಿಕ ವಿಕೋಪಕ್ಕೊಳಪಟ್ಟ ವ್ಯಕ್ತಿಗಳಿಗೆ ನೀಡುವ ಪರಿಹಾರದ ಬಗ್ಗೆ ಈಗಾಗಲೇ ಇರುವ ಸ್ಥಾಯಿ ಸೂಚನೆಗಳ ಜೊತೆಗೆ, ಅಂತಹ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಯ ಪುನಃಪ್ರತಿಷ್ಠಾಪನೆಯನ್ನೊಳಗೊಂಡ ಎಲ್ಲಾ ವಿವಾದಾಂಶಗಳನ್ನು ಅವಲೋಕಿಸಲು ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿದ ಆಂತರಿಕ ಕ್ರಿಯಾಸಮಿತಿಯು ಶಿಫಾರಸ್ಸುಗಳನ್ನು ಅನುಪಾಲಿಸುವ ಸಲುವಾಗಿ ಈ ಮಾರ್ಗಸೂಚಿಯನ್ನು ನೀಡಿದೆ. 2005–2006ರ ಮಧ್ಯಾವಧಿ ನೀತಿಗೆ ಸಂಬಂಧಿಸಿದಂತೆ ಅಕ್ಟೋಬರ್ 2005ರ ಪ್ರಕಟಣೆಗೆ ಅನುಸಾರವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಆಂತರಿಕ ಕ್ರಿಯಾಸಮಿತಿಯನ್ನು ರಚಿಸಿದೆ.

ನೈಸರ್ಗಿಕ ವಿಕೋಪಕ್ಕೊಳಗಾಗಿರುವ ಪ್ರದೇಶದಲ್ಲಿ ತೊಂದರೆಗೊಳಗಾದ ಬ್ಯಾಂಕ್ ಶಾಖೆಗಳು ಎಂದಿನಂತೆ ಕಾರ್ಯ ನಿರ್ವಹಿಸಲು ಅಸಮರ್ಥವಾದ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕಿಗೆ ಸೂಚನೆ ನೀಡಿ ಬ್ಯಾಂಕುಗಳು ತಾತ್ಕಾಲಿಕ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಬಹುದು. ತೊಂದರೆಗೊಳಗಾದ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆ ನೀಡುವುದಕ್ಕೆ ಉಪ ಕಚೇರಿಗಳನ್ನು, ವಿಸ್ತರಣಾ ಕೌಂಟರ್‌ಗಳನ್ನೂ ಅಥವಾ ಸಂಚಾರಿ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡುವುದರ ಮೂಲಕ ಬ್ಯಾಂಕುಗಳು ಖಚಿತಪಡಿಸಿಕೊಳ್ಳುವುದು. ಗ್ರಾಹಕರ ತಕ್ಷಣದ ನಗದು ಅವಶ್ಯಕತೆಗಾಗಿ ನಿಗಧಿತ ಠೇವಣಿಗಳ ಹಣ ಹಿಂತೆಗೆತಕ್ಕೆ ಯಾವುದೇ ದಂಡವನ್ನು ಬ್ಯಾಂಕುಗಳು ವಿಧಿಸಬಾರದು. ಎಟಿಎಮ್‌ಗಳ ಸೇವೆಯನ್ನು ಶೀಘ್ರವಾಗಿ ಪುನರ್‌ಪ್ರತಿಷ್ಠಾಪಿಸಲು ಅಥವಾ ಇದಕ್ಕೆ ಬದಲಿ ವ್ಯವಸ್ಥೆಯನ್ನು ಆದಷ್ಟು ಬೇಗ ಏರ್ಪಡಿಸಬೇಕು. ಬ್ಯಾಂಕುಗಳು ಬೇರೆ ಎಟಿಎಮ್ ಸಂಪರ್ಕ, ಸಂಚಾರಿ ಎಟಿಎಮ್‌ಗಳು ಮುಂತಾದವನ್ನು ಗ್ರಾಹಕರಿಗೆ ಸುಲಭವಾಗಿ ಎಟಕುವಂತೆ ನೋಡಿಕೊಳ್ಳಬೇಕು. ಕರೆನ್ಸಿ ಚೆಸ್ಟ್‌ಗಳು ಅಸ್ತವ್ಯಸ್ತಗೊಂಡಕಡೆ ಆ ಪ್ರದೇಶದ ನಗದಿನ ಅಗತ್ಯವನ್ನು ಅರಿತು ತಾತ್ಕಾಲಿಕವಾಗಿ ಕರೆನ್ಸಿ ಚೆಸ್ಟ್ ಬ್ಯಾಲೆನ್ಸ್‌ಗೆ ಬದಲಾಗಿ ನಗದು ರಿಪೋಸಿಟರಿಗಳನ್ನು ತೆರೆಯಲು ಅದಕ್ಕೆ ಅನುಮತಿ ಇದೆ.

ಹೀಗೆ ಆರ್ಥಿಕ ನೆರವು ನೀಡುವಾಗ ಬ್ಯಾಂಕುಗಳು ತಮ್ಮ ಹಾಲಿ ಗ್ರಾಹಕರಿಗೆ ಅವರ ಅಗತ್ಯಗಳಿಗೆಂದು ಹತ್ತು ಸಾವಿರ ರೂಪಾಯಿಗಳನ್ನು ಆಧಾರರಹಿತ ಸಾಲವನ್ನಾಗಿ ನೀಡಬಹುದು. ಉತ್ಪಾದಕ ಕೆಲಸಗಳನ್ನು ಪುನಃಸ್ಥಾಪಿಸಲು ಸಕಾಲಿಕ ಹೊಸ ಆರ್ಥಿಕ ನೆರವನ್ನು ಹಾಲಿ ಸಾಲಗಾರರಿಗೆ ಮಾತ್ರವಲ್ಲದೇ ಬೇರೆ ಯೋಗ್ಯ ಸಾಲಗಾರರಿಗೂ, ಪ್ರಕೋಪದ ಹಾನಿಯ ಅನ್ವಯ ಸಾಲ ತೀರುವಳಿಯ ಅವಧಿಯನ್ನು ವಿಸ್ತರಿಸಿ 7 ರಿಂದ 10 ವರ್ಷಗಳ ಅವಧಿ ಸಾಲವನ್ನು ಒಂದು ವರ್ಷದ ನಂತರ ಸಾಲ ತೀರಿಸುವ ಪ್ರಕ್ರಿಯೆಗೆ ಒಳಪಡಿಸಿ ನೀಡುವುದು.

ಗುಜರಾತು, ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರ, ಈ ಮೂರು ರಾಜ್ಯಗಳಲ್ಲಿ ಮಹಾಪೂರವಾದ ಕಾರಣ ರಾಜ್ಯಮಟ್ಟದ ಬ್ಯಾಂಕರ್ಸ್ ಕಮಿಟಿ (SLBC) ಪ್ರವರ್ತನಕಾರ ವಿಶೇಷ ಎಸ್.ಎಲ್.ಬಿ.ಸಿ. ಸಭೆಯನ್ನು ಕರೆದು ತೊಂದರೆಗೊಳಗಾದ ಪ್ರದೇಶಗಳಿಗೆ ಪರಿಹಾರ ನೀಡುವ ಕ್ರಮಗಳನ್ನು ಕೈಗೊಳ್ಳುವುದು.

ಪ್ರಕಟಣೆ 2006–2007/207

ಅಲ್ಪನಾ ಕಿಲ್ಲಾವಾಲ
ಮುಖ್ಯಮಹಾ ವ್ಯವಸ್ಥಾಪಕರು